Doc-196
TP-4

Regd No M 1299 34 th Year ತಾ॥ 25—5—51

SATYAVADI

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ಬಾಯರು [ಬಿಡಿ ಪ್ರತಿ 3 ಸೈ

ಭಾರತ ಪೆಟ್ರೋಲು ಕಲಹದಲ್ಲಿ ಪ್ರವೇಶಿಸುವುದಿಲ್ಲ

ಬ್ರಿಟಿಷ್-ಪರ್ಷಿಯಾ ಎಣ್ಣೆ ಕಲಹವನ್ನು ಬಗೆಹರಿಸುವ ಪ್ರಯತ್ನಕ್ಕೆ ಭಾರತ ಪ್ರವೇಶಿಸುವದಿಲ್ಲವೆಂದು ದೆಹಲಿಯಿಂದ ಗೊತ್ತಾಗಿದೆ.

ಹಳ್ಳಿಗಾಡು ಕ್ಷೇತ್ರದಲ್ಲಿ ರೇರ್ಷ ರದ್ದಾಯಿತಿಯಿಲ್ಲ

ಶ್ರೀ ಮರಿಯಪ್ಪನವರ ಹೇಳಿಕೆ

ಮೈಸೂರು : ಆಹಾರ ಸಚಿವರಾದ ಶ್ರೀ ಟಿ. ಮರಿಯಪ್ಪನವರು ನಿನ್ನೆ ಕೇಂದ್ರ ಆಹಾರ ಸಂಶೋಧನ ಸಂಸ್ಥೆಯಲ್ಲಿ ಏರ್ಪಡಿಸಲಾಗಿದ್ದ ಸಿಂಪೋಸಿಯಂ ಅಧ್ಯಕ್ಷ ಸ್ಥಾನದಿಂದ ಭಾಷಣ ಮಾಡುತ್ತಾ : ನೆರೆರಾಜ್ಯ ವಿದಂತಿಸ್ತಿಂತೆ, ಹಳ್ಳಿಗಾಡು ಪ್ರದೇಶಗಳಲ್ಲಿ ನಾವು ಪಡಿತರ ಕ್ರಮವನ್ನು ರದ್ದಾಯಿತಿ ಮಾಡುವ ಸಂಭವವಿಲ್ಲ ಎಂದರು.

ಧಾನ್ಯ ದಾಸ್ತಾನು ಮಳಿಗೆಗಳನ್ನು ನಿರ್ಮಿಸಲು ಸರ್ಕಾರಕ್ಕೆ ಧನವಿಲ್ಲ. ಆಹಾರ ಧಾನ್ಯ ದಾಸ್ತಾನು ಮಾಡುವುದರಲ್ಲಿ ಅನುಭವ ಅಭಾವದಿಂದ ಎಷ್ಟೋ ಧಾನ್ಯ ನಾಶವಾಗುತ್ತಿದೆ – ಹೀಗೆಂದು ಅವರು ತಿಳಿಸಿದರು.

ಪಡಿತರ ಕ್ರಮ ಮೈಸೂರು ಸಂಸ್ಥಾನದಲ್ಲಿ ಮುಂದುವರಿಯುವಂತಿಲ್ಲ – ಎಂದು ಸಚಿವರು ತಿಳಿಸಿದರು.

ಧಾನ್ಯಕ್ಕಾಗಿ ಕೋಟಿಗಟ್ಟಲೆ ಧನ ಪರದೇಶಗಳಿಗೆ ಹೋಗುತ್ತಿರುವುದನ್ನು ತಡೆಹಿಡಿದು ನಾವು ಸ್ವಾವಲಂಬಿಗಳಾಗಬೇಕು – ಶ್ರೀ ಟಿ. ಮರಿಯಪ್ಪನವರು ತಿಳಿಸಿದರು.

ಆಹಾರ ಬಗ್ಗೆ ಪಂಚಾಯತ್‌ರಿಂದ ಬರುವ ಕ್ರಿಯಾತ್ಮಕ ಯೋಜನೆಗಳಿಗೆ ಭಾರತ ಸರ್ಕಾರ ಮೊದಲು ಗಮನ ಕೊಡುವುದು. ಆಹಾರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಶಾಸನೆಲ್ಲರೂ ಮುಂದಾಗಬೇಕು – ಎಂದವರು ತಿಳಿಸಿದರು.

ಸಿಂಪೋಸಿಯ ಕಾರ್ಯಕ್ರಮ ನಿನ್ನೆಗೆ ಮುಕ್ತಾಯವಾಯಿತು.

× ಭಾರತ ಸರ್ಕಾರವು ಸಂಯುಕ್ತ ರಾಷ್ಟ್ರ ಮಕ್ಕಳ ನಿಧಿಗೆ ರೂ 5 ಲಕ್ಷ ಧನ ಸಹಾಯ ಮಾಡಿದೆಯೆಂದು ನ್ಯೂಯಾರ್ಕ್ ವಾರ್ತೆ.

× ರೊಮೇನಿಯಾದ ಕಮ್ಯುನಿಸ್ಟ್ ಸರ್ಕಾರವು ಅಲ್ಲಿಯ ಪ್ರಜೆಗಳ ಪ್ರಯಾಣ ಮತ್ತು ವಾಸಸ್ಥಳಗಳ ಬದಲಾವಣೆ ವಿಷಯದಲ್ಲಿ ಬಹು ಕಠಿಣ ಕಾರ್ಯಕ್ರಮವನ್ನು ಸರಿಸತ್ತಿದೆ ಎಂದು ಬೋಸ್ಟನ್ ವಾರ್ತೆ ತಿಳಿಸುತ್ತದೆ.

× ದಾವಣಗೆರೆಯ ಇಂಜಿನಿಯರಿಂಗ್ ಕಾಲೇಜ್ ಉದ್ಘಾಟನೆಯನ್ನು ಜುಲೈ ತಿಂಗಳಿನಲ್ಲಿ ಪ್ರಭುಗಳು ನೆರವೇರಿಸುವ ವಾರ್ತೆ ಇದೆ.

ತಂಜಾವೂರಿನ ಮಾಸ್ತೋಜಪ್ಪ ಅಂಗಡಿ ಬೀದಿಯಲ್ಲಿರುವ ಗಿರಣಿ ಬಟ್ಟೆ ಅಂಗಡಿಯೊಂದಕ್ಕೆ ನಲವತ್ತು ಮಂದಿ ನುಗ್ಗಿ ಬಟ್ಟೆ ಮತ್ತು ಬಿಲ್ ಪುಸ್ತಕಗಳನ್ನು ತೆಗೆದುಕೊಂಡು ಹೋಗಿರುವರು ಈ ಸಂದರ್ಭದಲ್ಲಿ ಗಣಪತಿ ಮತ್ತು ಕೃಷ್ಣ ಮೂರ್ತಿ ಎಂಬೀರ್ವ ಕಮ್ಯುನಿಸ್ಟರು ದಸ್ತಗಿರಿಯಾಗಿದೆ.

ಕಾಂಗ್ರೆಸಿನ ಹೆಸರು ಕೆಡಿಸಲು ಕಮ್ಯುನಲ್ ಜಿ. ಓ.

ಮದರಾಸು ಸರ್ಕಾರದ ಹಣಕಾಸಿನ ಮಂತ್ರಿ ಶ್ರೀ ಬಿ ಗೋಪಾಲರೆಡ್ಡಿಯವರು ಮಾಯಾವರಂನ ಪೌರಸಭೆ ಉದ್ಯಾನದಲ್ಲಿ ಭಾಷಣ ಮಾಡುತ್ತಾ ಕಮ್ಯುನಲ್ ಜಿ ಓ ಬಗ್ಗೆ ಮಾತನಾಡುತ್ತಾ ಪ್ರಗತಿಯುತ ಬ್ರಾಹ್ಮಣೇತರರಾದ ಮುದಲಿಯಾರರು, ಪಿಳ್ಳೆಗಳು ಮತ್ತು ರೆಡ್ಡಿಯಾರರು ಇವರಿಗೆ ಜಸ್ಟಿಸ್ ಪಕ್ಷ ಸಹಾಯ ಮಾಡುತ್ತಿದೆ ಆದರೆ ಕಾಂಗ್ರೆಸ್ ಅ ಬ್ರಾಹ್ಮಣ ಹಿಂದುಳಿದವರಾದ ಮೋಜಿ ಮತ್ತು ನಾಯಿಂದರಿಗೆ ಸಹಾಯ ಮಾಡುತ್ತಿದೆ ಎಂದರು ಕಾಂಗ್ರೆಸಿನ ಹೆಸರಿಗೆ ಕಲಂಕ ತರಲು ಕಮ್ಯುನಲ್ ಜಿ. ಓ. ಇರಬೇಕೆಂದು ಕಪ್ಪಂಗಿಯವರು ಪ್ರದರ್ಶನ ಮಾಡಿದರೆಂದು ಮಂತ್ರಿಗಳು ಅಭಿಪ್ರಾಯಪಟ್ಟರು.

ರಾಜ್ಯಾಂಗ ಘಟನೆ ತಿದ್ದುಪಡಿ ಮಸೂದೆ ಕ್ಲಾಸ್‌ವಾರು ಓಟಿಗೆ ಬರುವದೆಂದು ದೆಹಲಿ ವಾರ್ತೆ.

ವಾರ್ತೆಗಳು

ಕಮ್ಯುನಿಸ್ಟ್ ಡೆಟಿನ್ಯೂ ರಾಜರೆಡ್ಡಿ ಎಂಬವನ ಪರವಾಗಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಹೈದರಾಬಾದ್ ಹೈಕೋರ್ಟ್ ತಿರಸ್ಕರಿಸಿದೆ. ಕಳೆದ ವರ್ಷ ಅಕ್ಟೋಬರ್ 29 ರಲ್ಲಿ ಅವನು ಕಪ್ಪಿಸಿಕೊಳ್ಳಲೆತ್ನಿಸಿದಾಗ ಮಿಲಿಟರಿ ಗುಂಡಿನೇಟಿಗೆ ಸಿಕ್ಕಿ ಸತ್ತ.

ಖಜಾನೆ ಅಧಿಕಾರಿಗಳ ಅನುಮತಿ ಇಲ್ಲದೆ ಅಂಬಾಲದಲ್ಲಿ ಪೆಟ್ರೋಲ್ ಮಾರಾಟ ಮಾಡುವದಿಲ್ಲ.

ಅಂಚೆ ಲೆಕ್ಕ ವರ್ಗಾಯಿತಿ ಬಗ್ಗೆ ಭಾರತ-ಪಾಕ್‌ಗಳಲ್ಲಿ ಒಡಂಬಡಿಕೆಯಾಗಿದೆ

ಕೊರಿಯದಲ್ಲಿ ಶಾಂತಿ ಸಂಸ್ಥಾಪಿಸಲು ಭಾರತ ತನ್ನ ಪ್ರಯತ್ನವನ್ನು ಮುಂದುವರಿಸುವದೆಂದು ಫ್ರಿನ್ಸ್‌ಟೊ ವಾರ್ತೆ.

ಐರೋಪ್ಯ ಪ್ರಯಾಣಿಕನೋರ್ವನಿಂದ 3 ವರೆ ಲಕ್ಷ ರೂ ಬಾಳುವ 5 ನೂರು ಕ್ಯಾರೆಟ್ ವಜ್ರವನ್ನು ಬೊಂಬಾಯಿನಲ್ಲಿ ವಶಪಡಿಸಿಕೊಳ್ಳಲಾಗಿದೆ.

30 ಸಾವಿರ ಟನ್ ಅಕ್ಕಿ ಕೊಳ್ಳಲು ವಿಯೆಟ್ನಾಂ ಭಾರತಕ್ಕೆ ಅನುಮತಿ ಕೊಟ್ಟಿದೆ

ಹೈದರಾಬಾದಿನಲ್ಲಿರುವ ಕಮ್ಯುನಿಸ್ಟರು ಕಮ್ಯೂನಿಗಿನ ನೀತಿಯನ್ನು ತಪ್ಪೆಂದು ಸಾರಿದಲ್ಲಿ ಚುನಾವಣೆಯಲ್ಲಿ ಭಾಗವಹಿಸಲು ಅವರಿಗೂ ಅವಕಾಶ ಉಂಟೆಂದು ಆಚಾರ್ಯ ವಿನೋಬಭಾವೆ ತಿಳಿಸಿದ್ದಾರೆ

ವಾರ್ತೆಗಳು

ಪೆಟ್ರೋಲ್ ಸರಬರಾಜು ಈ ತನಕ ಭಾರತದಲ್ಲಿ ಸರಿಯಾಗಿದೆ. ಮುಂದೇನಾಗುವದೆಂಬುದನ್ನು ಹೇಳಲು ಸಾಧ್ಯವಿಲ್ಲ ಎಂದು ಕಾಮರಾಜ್ ಸಚಿವ ಶ್ರೀ ಗಾಡ್ಗಿಲ್ ದೆಹಲಿಯಲ್ಲಿ ತಿಳಿಸಿದ್ದಾರೆ.

ನಾನಾ ಅಭಿವೃದ್ಧಿಗಳ ಯೋಜನೆಗಾಗಿ ಮೈಸೂರು ಸರ್ಕಾರಕ್ಕೆ 16 ಕೋಟಿ ಸಾಲ ಕೊಡುವ ಭರವಸೆಯನ್ನು ಭಾರತ ಸರ್ಕಾರ ಕೊಟ್ಟಿದೆ.

ಬ್ರಿಟನ್ನಿನ ಸಣ್ಣವುಟ್ಟ ನಗರಗಳ ವಾರಪತ್ರಿಕೆಗಳು ನ್ಯೂಸ್‌ಪ್ರಿಂಟ್ ಅಭಾವದಿಂದ ಪ್ರಕಟಣೆಯನ್ನು ಬಂದು ಮಾಡಿವೆ.

ಕಾನ್ಪುರ ಜಿಲ್ಲೆಯು ಇನ್ನೂರಕ್ಕೂ ಮೇಲ್ಪಟ್ಟು ಸಮಾಜವಾದಿಗಳು ಮುಂದಿನ ಮಾಹೆ 3 ನೇ ದಿನ ನಡೆಯಲಿರುವ ಜನತಾ ಪ್ರದರ್ಶನದಲ್ಲಿ ಭಾಗವಹಿಸುವರು. ಪ್ರದರ್ಶನ ಜರುಗುವದು ದೆಹಲಿಯಲ್ಲಿ.

ಲಕ್ನೋದಲ್ಲಿ ನಾನಾಪಾತ್ರಂತ್ಯ ಮುದ್ರಣ ಕೆಲಸಗಾರರ ಸಭೆ ನಡೆದು ಅಖಿಲ ಭಾರತ ಮುದ್ರಣ ಕೆಲಸಗಾರರ ಸಂಘ ನಿರ್ಮಿಸುವ ನಿರ್ಣಯವಾಯಿತು.

ಫ್ರಾನ್ಸ್ ಹಾಗೂ ನಾರ್ವೆ ಮಂದಿ ಭಾರತದ ಒಂದಾಪ್ತ ಪ್ರದೇಶಗಳಿಗೆ ಧಾನ್ಯ ಕೊಡಲು ಮುಂದೆ ಬಂದಿರುವದಾಗಿ ಪ್ಯಾರಿಸ್ ವಾರ್ತೆ.

ಉತ್ತರ ಪ್ರದೇಶದ ಅಕೌಂಟೆಂಟ್ ಜನರಲ್ ಕಚೇರಿಗುಮಾಸ್ತನೋರ್ವ 34 ಸಹಸ್ರ ರೂ. ದುರುಪಯೋಗ ಮಾಡಿರುವನೆಂದು ಆಪಾದಿಸಲಾಗಿರುವ ವರದಿ ಅಲಹಾಬಾದಿನಿಂದ ಬಂದಿದೆ. ಖಜಾನೆಯಿಂದ ಮತ್ತೆ 10 ಸಾವಿರ ಎತ್ತಲಿದ್ದಾಗ ನೋಡಲ್ಪಟ್ಟು ಜೂರಿ ಇದು ಕೊಂಡ.

ಕೊರಿಯ ಯುದ್ಧ ಭೂಮಿಯಲ್ಲಿ ಕಮ್ಯುನಿಸ್ಟ್ ಸೇನೆಗಳಿಗೆ ವಿಶ್ವಸಂಸ್ಥೆ ಪಡೆಗಳಿಂದ ತೀವ್ರವಾದ ಪೆಟ್ಟುಗಳು ಬೀಳುತ್ತಿರುವದಾಗಿ ವಾರ್ತೆ ಬಂದಿದೆ.

ಭಾರತ ಮಹಾ ಚುನಾವಣೆಯಲ್ಲಿ ಪ್ರಭಾವ ಬೀರುವ ಅಧಿಕಾರಿಗಳಿಗೆ 6 ತಿಂಗಳು ಸಜ ವಿಧಿಸಬೇಕೆಂಬ ಸೂಚನೆ ನಿನ್ನೆ ಪಾರ್ಲಿಮೆಂಟ್ನಲ್ಲಿ ಒಪ್ಪಿತವಾಯಿತು.

ರಷ್ಯ ಇರಾಕ್ ಆಕ್ರಮಣ ಮಾಡುವ ಭಯ ಇರಾನಿಯರ್ಟ್‌ನಲ್ಲಿ ಇದೆ.

ಬೈಬಲ್ಲಿನಲ್ಲಿ ಅಹಿಂಸೆ

ಕಾರ್ಪಿಥಿಯನ್ಸ್ — 3-16-17 ನಲ್ಲಿ ಹೀಗೆ ಹೇಳಿದೆ—

ನೀನು ಪರಮಾತ್ಮನ ಮಂದಿರವೆಂದೂ, ಸ್ವಯಂ ಈಶ್ವರನು ನಿನ್ನೊಳಗೆ ನಿವಾಸ ಮಾಡಿಕೊಂಡಿರುವನೆಂಬುದೂ ನೀನು ಅರಿಯೆಯಾ? ಯಾವನಾದರೂ ದೇವರ ಆಲಯವನ್ನು ಅಶುದ್ಧಗೊಳಿಸಿದಲ್ಲಿ ಅವನನ್ನು ದೇವರು ನಾಶಮಾಡುತ್ತಾನೆ; ಏಕೆಂದರೆ ದೇವಾಲಯವು ಪವಿತ್ರವಾದದ್ದು; ಆ ದೇವಾಲಯವೇ ನೀನಾಗಿರುವಿ.

ಕಾರ್ಪಿಥಿಯನ್ಸ್ — 7-1 ರಲ್ಲಿ ಹೀಗೆ ಹೇಳಿದೆ— ನಾವು ಶರೀರ ಮತ್ತು ಆತ್ಮಗಳ ಎಲ್ಲಾ ಮಲಿನಗಳಿಂದ ಶುದ್ಧರಾಗೋಣ

ಜನಿಸಿಸ್ — 1-29 ಮನುಷ್ಯನ ಆಹಾರದ ವಿಷಯದಲ್ಲಿ ಹೀಗೆ ತಿಳಿಸಿದೆ—

ದೇವರು ಹೀಗೆ ಹೇಳಿದನು—ನೋಡು, ನಾನು ನಿನಗಾಗಿ ಪ್ರಪಂಚದಲ್ಲಿರುವ ಬೀಜಗಳನ್ನು ಬಿಡುವ ಎಲ್ಲಾ ಔಷಧಿಗಳನ್ನೂ, ಬೀಜದೊಂದಿಗಿರುವ ಹಣ್ಣುಗಳಿಂದ ಕೂಡಿದ ಪ್ರತಿ ಮರವನ್ನೂ ಕೊಟ್ಟಿದ್ದೇನೆ; ನಿನಗೆ ಇದು ಆಹಾರವಾಗಿರುತ್ತದೆ.

ಇದರಿಂದ ಶಾಖಾಹಾರ, ಫಲಾಹಾರಗಳೇ ಮನುಷ್ಯನಿಗೆ ದೇವರಿಂದ ನಿರ್ಮಾಣ ಮಾಡಲ್ಪಟ್ಟ ಆಹಾರವೆಂದು ಸ್ಪಷ್ಟವಾಗುತ್ತದೆ.

ದೇಹಗಳ ಮತ್ತು ಮನಸಿಗಳ ಶುದ್ಧತೆಯುಳ್ಳವರು ಪವಿತ್ರಾತ್ಮರು ದೇಹ ಮತ್ತು ಮನಸಿಗಳ ಶುದ್ಧತೆಗಳಿಲ್ಲದೆ ದೈವಿಕಭಾವ ಪೂರ್ಣವಾಗಿರುವುದು ಅಸಂಭವವು. ಆದ್ದರಿಂದ ಏಸುಕ್ರಿಸ್ತನು ಪರಿಶುದ್ಧಾತ್ಮನು ಹಾಗೂ ಪರಿಶುದ್ಧ ದೇಹಿಯು. ಅಂಥಾ ಮಹಾತ್ಮನು ಎಂದಿಗೂ ಮಾಂಸಾಹಾರವನ್ನು ಸೇವಿಸಲು ತನ್ನ ಅನುಯಾಯಿಗಳಿಗೆ ಬೋಧಿಸಿರಲಾರನು; ಖಂಡಿತ. (ಓಂ)

Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 12 ಆಣೆ

ರಣಜಿತ್ ಆಕರ್ಷಣೀಯ 3 ನೇ ವಾರ

SAGAI ನಗಾಯಿ

ರೆಹನಾ, ಯಾಕೂಬ್, ಪ್ರೇಮನಾಥ್, ಗೋಪ್ ಪಾತ್ರವಹಿಸಿರುವ
ಸಂಗೀತ, ನೃತ್ಯ, ಹಾಸ್ಯಲಹರಿಯಿಂದ ಕೂಡಿದ ಅಮೋಘ ಹಿಂದೀ ವಾಕ್ಚಿತ್ರ
ಪ್ರತಿದಿನ 3 ಆಟಗಳು

Edited, Printed and Published by M. S. Krishna Rao, at the Satyavadi Press Chamarajapuram Mysore

ಉಡ್‌ಲ್ಯಾಂಡ್ಸ್

18-5-5 ರಿಂದ

ನಿರೂಪಂಕಾಯ್, ತ್ರಿಲೋಕಕಪೂರ್
ರಾಂಸಿಂಗ್, ದುರ್ಗಾಖೋಟೆ
ಪಾತ್ರವಹಿಸಿರುವ ಆಕರ್ಷಣೀಯ, ವಿನೋದನ
ಚಿತ್ರರತ್ನ (ಹಿಂದಿ)

ಭೀಮಸೇನ್
BHIMSEN

ಪ್ರತಿದಿನ 3 ಪ್ರದರ್ಶನಗಳು



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ
ಹೆಗ್ಗುರುತು

ಐ.ಟಿ.ಎಲ್ ಗ್ರೈಪ್ ಸಿರಪ್